UNIVERSITY LIBRARY
TUESDAY 25-03-2025
Agri Newspaper Clippings

For more information visit
University Library Website
Web - uasbagrilibindia.org
E-mail- librarian@uasbangalore.edu.in

Viswavani pg 11

ಸಿ ಯಗಟಿ ರಘು ನಾಡಿಗ್

''ರೈತರು ಈ ದೇಶದ ಅನ್ನದಾತರು, ಹಳ್ಳಿಗಳು ಈ ದೇಶದ ಜೀವನಾಡಿಗಳು. ರೈತರು ಮತ್ತು ಹಳ್ಳಿಗಳು ಉದ್ಧಾರವಾದರೆ ದೇಶ ಉದ್ಧಾರವಾದಂತೆ'' ಎಂಬುದು ಹಲವು ವೇದಿಕೆಗಳಲ್ಲಿ ಕೇಳಿಬರುವ ಮಾತುಗಳು. ಆದರೆ 'ಹೀಗೆ ಕುಟ್ಟಿದ ತೌಡು' ಎಷ್ಟರ ಮಟ್ಟಿಗೆ ರೈತರ ಪ್ರಯೋಜನಕ್ಕೆ ಬರುತ್ತಿದೆ? ನಾಡಿನ ರೈತರ ಬದುಕು, ಕೃಷಿಕ್ಷೇತ್ರದ ಸ್ಥಿತಿಗತಿ ನಿಜಕ್ಕೂ ಹಸನಾಗಿದೆಯೇ? ಎಂದೆಲ್ಲಾ ಪ್ರಶ್ನಿಸಿಕೊಂಡರೆ ಸಮಾಧಾನಕರ ಉತ್ತರವೇನೂ ಸಿಗುವುದಿಲ್ಲ.

● **ಸಮಸ್ಯೆಗಳು ಒಂದೆರಡಲ್ಲ:** ಕೃಷಿಕರು ಎದುರಿಸುತ್ತಿರುವ ಸಮಸ್ಯೆಗಳು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಅವರ ಬದುಕಿನ ಮೇಲೆ ಪರಿಣಾಮ ಬೀರುತ್ತಿವೆ. ನಾಡಿಗೇ ಅನ್ನದಾತರುವ ರೈತನ ಹೊಟ್ಟೆಯು ಬಿನ್ನಿಗಂಟಿಕೊಂಡು ಯಾವುದೋ ಕಾಲವಾಗಿದೆ. ನೀರಾವರಿ ವ್ಯವಸ್ಥೆಯ ಅಸಮರ್ಪಕತೆಯಿಂದ ಮೊದಲ್ಗೊಂಡು, ಗುಣಮಟ್ಟದ ಬಿತ್ತನೆ ಬೀಜ ಮತ್ತು ರಸಗೊಬ್ಬರಗಳ ಅಲಭ್ಯತೆ, ಬೆವರು ಸುರಿಸಿ ಬೆಳೆದ ಬೆಳೆಗೆ ಬೆಂಬಲಬೆಲೆ ಸಿಗದಿರುವಿಕೆ, ಮಧ್ಯವರ್ತಿಗಳ ಕಾಟ ಹೀಗೆ ರೈತರು ಎದುರಿಸುತ್ತಿರುವ ಸಮಸ್ಯೆಗಳು ಒಂದೆರಡಲ್ಲ.

● **ಸುಧಾರಿಸದ ಸಾರಿಗೆ ವ್ಯವಸ್ಥೆ:** ದೇಶಕ್ಕೆ ಸ್ವಾತಂತ್ರ್ಯ ದಕ್ಕಿ ದಶಕಗಳೇ ಆಗಿದ್ದರೂ, ಹಳ್ಳಿಗಳಲ್ಲಿನ ಸಂಪರ್ಕವ್ಯವಸ್ಥೆ ಇನ್ನೂ ಸುಧಾರಿಸಿಲ್ಲ. ಹೀಗಾಗಿ ತಳ ಮಟ್ಟದ/ಸ್ಥಿತಿವಂತರಲ್ಲದ ರೈತರು ಕೃಷಿ ಉತ್ಪನ್ನಗಳನ್ನು ಮಾರುಕಟ್ಟೆಗಳಿಗೆ ಸಾಗಿಸಲು ಹರಸಾಹಸ ಪಡುವಂತಾಗಿದೆ. ಹೀಗಾಗಿ, ತಾವು ಬೆಳೆದ ಆಹಾರ ಧಾನ್ಯಗಳಿಗೆ ಉತ್ತಮ ಬೆಲೆ ಸಿಗಬಹುದಾದ ಮಾರುಕಟ್ಟೆ ಪ್ರದೇಶದವರೆಗೆ ಒಯ್ಯಲು ಸಾಧ್ಯವಾಗದೆ, ಅನಿವಾರ್ಯತೆಯ ಬಲಿಪಶುಗಳಾಗಿ ಸನಿಹದ ಯಾರಿಗಾದರೂ ಅವನ್ನು ಸುರಿದು, ಸಿಕ್ಕಷ್ಟು ಹಣವನ್ನೇ 'ದೇವರ ಪ್ರಸಾದ' ಎಂದು ಕಣ್ಣಿಗೊತ್ತಿಕೊಳ್ಳಬೇಕಾಗಿದೆ.

● **ದೇಶದ ಆಸ್ತಿ, ಬಂಡವಾಳ ನಾಸ್:** ಅಭಿವೃದ್ಧಿಹೊಂದಿದ ದೇಶಗಳಲ್ಲಿ ಕೃಷಿ ಸಂಬಂಧಿತ ಚಟುವಟಿಕೆಗಳಿಗಾಗಿ ಬಗೆಬಗೆಯ ಆಧುನಿಕ ಯಂತ್ರೋಪಕರಣಗಳನ್ನು ಹಾಗೂ ಸಾಧನ-ಸಲಕರಣೆಗಳನ್ನು ರೈತರು ಬಳಸುವುದಿದೆ. ಆದರೆ, ಕೆಲಪಟ್ಟು ನಿರ್ದರ್ಶನಗಳನ್ನು ಹೊರತುಪಡಿಸಿದರೆ ಬಹುತೇಕ ಪ್ರದೇಶಗಳಲ್ಲಿ ರೈತರು ಇನ್ನೂ ಹಳೆಯ ಬೇಸಾಯ ಪದ್ಧತಿಗೇ ಜೋತುಬಿಳುವಂತಾಗಿದೆ. ಇದು ಆಗತ್ಯಕ್ಕಿಂತ ಹೆಚ್ಚಿನ ಸಮಯವನ್ನು ಬೇಡುವ ಪಾಬಾತ್ಕಾಗಿರುವುದರಿಂದ ದುಡಿದದ್ದು ರೈತರ ಕೈಗೆ ಹತ್ತುತ್ತಿಲ್ಲ. ಸುಧಾರಿತ ಕೃಷಿ ಉಪಕರಣಗಳನ್ನು ಖರೀದಿಸಲು ರೈತರ ಬಳಿ ಬಂಡವಾಳವಿಲ್ಲ. ಒಂದೊಮ್ಮೆ ಖಾಸಗಿ ಸಾಲದಾತರಿಂದ ಹಣ ಪಡೆಯಲು ಮುಂದಾಗೋಣವೆಂದರೆ ಅವರು ವಿಧಿಸುವ ದುಬಾರಿ ಬಡ್ಡಿಯನ್ನು ಜೀರ್ಣಿಸಿಕೊಳ್ಳುವುದು ರೈತರಿಗೆ ಆಗುತ್ತಿಲ್ಲ. ಹೀಗಾಗಿ, ಕೃಷಿಕ್ಷಾಂತಿಯಲ್ಲಿ ಭಾಗಿಯಾಗುವ ಮಹದಾಸೆಯಿದ್ದರೂ ಕೈ ಖಾಲಿಯಾಗಿರುವ ಕಾರಣ ರೈತರು 'ಅಜ್ಜ ಹಾಕಿದ ಆಲದ ಮರಕ್ಕೇ' ಜೋತುಬೀಳುವಂತಾಗಿದೆ.

● **ಮಾರುಕಟ್ಟೆಯಲ್ಲಿ ವಗಬೇಕು:** ಕೃಷಿ ಉತ್ಪನ್ನವನ್ನು ಗ್ರಾಹಕರಿಗೆ ಮುಟ್ಟಿಸುವ ನಿಟ್ಟಿನಲ್ಲಿನ ಮಧ್ಯದ ಕೊಂಡಿಯಾದ ಖರೀದಿದಾರರನ್ನು ಹುಡುಕುವುದು ಕೃಷಿಕರಿಗೆ ಒಡಗುವ ಮತ್ತೊಂದು ಸವಾಲು. ಆದರೆ, ತಮ್ಮ ಬೆಳೆಗಳಿಗೆ 'ಬಂಪರ್ ಬೆಲೆ' ಸಿಗುವುದಿರಲಿ, ಮಾಡಿದ ಖರ್ಚು ವಾಪಾಸ್ ಬಂದರೆ ಸಾಕು ಎನ್ನುವಂಥ ಪರಿಸ್ಥಿತಿಯನ್ನು ರೈತರು ಕೆಲವೊಮ್ಮೆ ಎದುರಿಸಬೇಕಾಗುತ್ತದೆ. ಕೃಷಿ ಉತ್ಪನ್ನಗಳಿಗೆ ಸಮಾಧಾನಕರ/ನ್ಯಾಯಯುತ ಬೆಲೆಯನ್ನು ಪಾವತಿಸಬಲ್ಲ ಖರೀದಿದಾರರನ್ನು ಹುಡುಕುವುದೇ ಕೃಷಿಕರಿಗೆ ದೊಡ್ಡ ತಲೆನೋವಿನ ಕೆಲಸ. ಇದು ಸಾಲದೆಂಬಂತೆ ಮಧ್ಯವರ್ತಿಗಳ ಕಾಟ ಬೇರೆ. ಈ ಎಲ್ಲ ಬೆಳವಣಿಗೆಗಳಿಂದ ರೋಸಹ್ತು, ಕೆಲವು ಬೆಳೆಗಾರರು ತಾವು ಮಾರುಕಟ್ಟೆಗೆ ಹೊತ್ತು ತಂದ ಟೊಮೇಟೋದಂಥ ಕೃಷಿ ಉತ್ಪನ್ನಗಳನ್ನು ಕಡಿಮೆ ಬೆಲೆಗೆ ಮಾರಲು ಮನಸ್ಸಾಗದೆ, ರಾಷ್ಟ್ರಕವಿ ಕುವೆಂಪು ಅವರು 'ನೇಗಿಲ ಹಿಡಿದ ಹೊಲದೊಳು ಹಾಡುತ ಉಳುವಾ ಯೋಗಿಯ ನೋಡಲ್ಲಿ' ಎಂಬ ಗೀತೆಯನ್ನು ರಚಿಸಿದ್ದು 1930ರಲ್ಲಿ. ನಿಸ್ಸಾರ್ಥಿ ರೈತನ ತ್ಯಾಗಮಯಿ ಬದುಕು, ಕೃಷಿಕಾರ್ಯದಲ್ಲಿನ ಬದ್ಧತೆ, ಪರಿಶ್ರಮಕ್ಕೆ ತಕ್ಕ ಫಲ ದಕ್ಕಿಸಿಕೊಳ್ಳಲಾಗದ ಅವನ ಸಂಕಷ್ಟಮಯ ಸ್ಥಿತಿ ಮುಂತಾದ ಭಾವಗಳು ಈ ಗೀತೆಯಲ್ಲಿ ಗೆನೆಗಟ್ಟಿವೆ. ವಿಪರ್ಯಾಸವೆಂದರೆ, ಕುವೆಂಪು ಅಂದು ಕಂಡ ರೈತನಿಗೂ ಇಂದಿನ ರೈತನಿಗೂ ಹೇಳಿಕೊಳ್ಳುವಂಥ ವ್ಯತ್ಯಾಸವೇನಿಲ್ಲ, ಆ ಕುರಿತಾದ ಒಂದು ಪಕ್ಷಿನೋಟ ಇಲ್ಲಿದೆ.

ಉಳುವಾ ಯೋಗಿಯ ಇನ್ನಾದರೂ ನೋಡಿಲ್ಲಿ

ಮುತ್ತಿಗೆ ಹಾಕಲಿ ಸೈನಿಕರೆಲ್ಲ, ಬಿತ್ತುಳುವುದನಿವ ಬಿಡುವುದೆ ಇಲ್ಲ...





ಅಷ್ಟನ್ನೂ ರಸ್ತೆಯಲ್ಲೇ ಚೆಲ್ಲಿ, ಮನೆಯ ದಾರಿ ಹಿಡಿದ ಉದಾಹರಣೆಗಳು ಸಾಕಷ್ಟಿವೆ.

● **ಕ್ವಲಿಸುವ ಮಣ್ಣು:** ಭರಪೂರ ಗಾಳಿ ಅಥವಾ ನೀರಿನ ಹರಿವಿನಿಂದಾಗಿ, ಕೆಲವೊಮ್ಮೆ ಅತಿಯಾದ ಉಳುಮೆಯಿಂದಾಗಿ ಫಲವತ್ತಾದ ಕೃಷಿಭೂಮಿಯ ಮಣ್ಣಿನ ಕಣಗಳ ಸವಕಳಿ ಆಗುವುದಿದೆ. ಇದರಿಂದಾಗಿ ಮಣ್ಣಿನ ಗುಣಮಟ್ಟ ನೀರನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಎರಡೂ ಕುಸಿಯುತ್ತವೆ. ಇದು ದೊಡ್ಡ ಪ್ರಮಾಣದಲ್ಲಿ ಸಂಭವಿಸಿದರೆ ರೈತರಿಗೆ ತಲೆನೋವು ಕಟ್ಟಿಟ್ಟ ಬುತ್ತಿ. ಗಾಳಿ-ನೀರಿನ ಹೊಡೆತಗಳಿಂದ ಜಮೀನಿನ ಫಲವತ್ತಾದ ಮಣ್ಣನ್ನು ರಕ್ಷಿಸಲು ಹಸಗೊಬ್ಬರ-ಎಲೆಗಳ ಹೊದಿಕೆಯನ್ನು ಸಜ್ಜುಗೊಳಿಸಲು ಅಥವಾ 'ಹೊದಿಕೆ ಬೆಳೆಗಳನ್ನು' ಬೆಳೆಸಲು ರೈತರು ಮುಂದಾಗಬೇಕಾಗುತ್ತದೆ. ಆದರೆ ಅಲ್ಲಿಯೂ ಬಂಡವಾಳದ ಸಮಸ್ಯೆ ಕಾಡುತ್ತದೆ.

● **ನೀರಾವರಿಯ ಸವಾಲು:** ಕೃಷಿಕಾರ್ಯಕ್ಕೆ ಬಹುತೇಕವಾಗಿ ಮಳೆನೀರನ್ನೇ ನೆಚ್ಚಿರುವಂಥ ವ್ಯವಸ್ಥೆ ನಮ್ಮದು. ಆದರೆ, ಹಹಾಮಾನ ಬದಲಾವಣೆ, ಕಾಡುಗಳ ಕಡಿತ, ಮಿತಿಮೀರಿದ ನಗರೀಕರಣ, 'ಕಾಂಕ್ರೀಟ್ ಜಂಗಲ್'ಗಳ ನಿರ್ಮಾಣ ಮುಂತಾದ ಕಾರಣದಿಂದಾಗಿ ಮಳೆರಾಯ ಅಂದುಕೊಂಡ ಸಮಯಕ್ಕೆ ಬರುತ್ತಿಲ್ಲ. ವರ್ಷಗಟ್ಟಲೆ ಮಳೆಯೇ ಬಂದಿರದ ಹಾಗೂ ಅದು ಜನರ ಆಹಾರಕ್ಕೂ ಜಾನುವಾರುಗಳ ಮೇವಿಗೂ ಸಂಚಕಾರ ತಂದಂಥ ಪರಿಸ್ಥಿತಿಗೂ ನಮ್ಮ ಕೃಷಿಕರು ಸಾಕ್ಷಿಯಾಗಿದ್ದಿದೆ. ಕೆಲವೊಮ್ಮೆ ಅಕಾಲದಲ್ಲಿ ಕುಂಭದ್ರೋಣ ಮಳೆಯಾಗಿ, ಬೆಳೆದ ಬೆಳೆಯೆಲ್ಲವೂ ನೀರಿನಲ್ಲಿ ಕೊಚ್ಚಿಕ್ಕೊಂಡು ಹೋದ ನಿದರ್ಶನಗಳೂ ಇವೆ.

ಕೃಷಿಕಾರ್ಯಕ್ಕೆ ಪೂರಕವಾಗಲೆಂದು ಕೆರೆಬೆಡೆ ಜಲಾಶಯ ಮತ್ತು ಕಾಲುಬೆಳೆಗಳನ್ನು ನಿರ್ಮಿಸಲಾಗಿದೆಯಾದರೂ, ನಾಡಿನ ಎಲ್ಲ ಭಾಗದ ರೈತರೂ ಇದರ ಪ್ರಯೋಜನ ಪಡೆಯುವಷ್ಟು ಸೌಭಾಗ್ಯವಂತರಾಗಿಲ್ಲ. ಹೋಗಲಿ, ಬೋರ್ ವೆಲ್‌ಗಳನ್ನಾದರೂ ಬಳಸೋಣವೆಂದರೆ ನಾಡಿನ ಬಹಳಷ್ಟು ಕಡೆ ಅಂತರ್ಜಲದ ಸ್ತರವೇ ಕುಸಿದು ರೈತರನ್ನು ಕಂಗಾಲಾಗಿಸಿದೆ. ಅಂತರ್ಜಲ ಮಟ್ಟವು ತೃಪ್ತಿದಾಯಕವಾಗಿರುವ ಕಡೆ ಸಮರ್ಪಕವಾಗಿ ಬಳಸಿಕೊಳ್ಳೋಣವೆಂದರೆ, ಅದನ್ನು ಪಂಪ್ ಮಾಡಿ ಮೇಲೆತ್ತಲು ವಿದ್ಯುಚ್ಛಕ್ತಿಯ ಸಮಸ್ಯೆ. ಹಳ್ಳಿಗಳಲ್ಲಿ ದಿನವಿಡೀ ವಿದ್ಯುಚ್ಛಕ್ತಿಯಿಲ್ಲದೆ ರಾತ್ರಿ ಯಾವುದೋ ಹೊತ್ತಲ್ಲಿ ನೀಡುವುದಿದೆ. ಅಷ್ಟು ಹೊತ್ತಿನಲ್ಲಿ ರೈತರು ಪಂಪ್‌ಸೆಟ್ ಬಳಸಿ ನೀರೆತ್ತಿ, ಹೊಲ-ಗದ್ದೆಗಳಿಗೆ ನೀರು ಕಟ್ಟುವುದು ಸಾಧ್ಯವೇ?!

ಸಿಗುತ್ತಿಲ್ಲ ಬಿತ್ತನೆಬೀಜ: ಗುಣಮಟ್ಟದ ಬಿತ್ತನೆ ಬೀಜ ಸಿಗದಿರುವುದು ರೈತರಿಗೆ ಒದಗಿರುವ ಮತ್ತೊಂದು ಸಮಸ್ಯೆ ಮತ್ತು ಸವಾಲು. ದಶಕಗಳ ಹಿಂದೆ ಬಿತ್ತನೆಗಾಗಿಯೇ ಬೀಜವನ್ನು ಎತ್ತಿಟ್ಟುಕೊಳ್ಳುವ ಪರಿಪಾಠವಿತ್ತು. ಆದರೆ ಬಹುರಾಷ್ಟ್ರೀಯ ಕಂಪನಿಗಳು ದಾಂಗುಡಿಯಿಟ್ಟ ಮೇಲೆ, ಹೀಗೆ ಬೀಜವನ್ನು ಕಟ್ಟಿಡುವ ಸಾಂಪ್ರದಾಯಿಕ ಪದ್ಧತಿಯನ್ನೂ ಬಹುತೇಕ ರೈತರು ಕೈಬಿಟ್ಟರು. ಇದರಿಂದಾಗಿ, ಆ ಕಡೆ ಬಿತ್ತನೆಗೆಂದು ಎತ್ತಿಟ್ಟ ಬೀಜಗಳೂ ಇಲ್ಲ, ಈ ಕಡೆ ಮಾರುಕಟ್ಟೆಯಲ್ಲೂ ಗುಣಮಟ್ಟದ ಬೀಜ ಸಿಗುತ್ತಿಲ್ಲ. ಇದರಿಂದಾಗಿ ಬೆಳೆಯ ಇಳುವರಿಯೂ ರೈತರಿಗೆ ಗಗನಕುಸುಮವಾಗಿದೆ. ಒಂದೊಮ್ಮೆ ಗುಣಮಟ್ಟದ ಬೀಜ ದಕ್ಕಿದರೂ, ಅವುಗಳ ದುಬಾರಿ ಬೆಲೆಯನ್ನು ರೈತರು ಭರಿಸಲು ಆಗುತ್ತಿಲ್ಲ. ಇದು ಗೊಬ್ಬರಕ್ಕೂ ಅನ್ವಯಿಸುವ ಮಾತು. ರೈತರು ಸ್ವತಃ ತಯಾರಿಸಿಕೊಳ್ಳುತ್ತಿದ್ದ ಸಗಣಿ ಗೊಬ್ಬರದ ಸ್ಥಾನವನ್ನು ಬಹುರಾಷ್ಟ್ರೀಯ ಕಂಪನಿಗಳ ರಸಗೊಬ್ಬರಗಳು ಆಕ್ರಮಿಸಿಕೊಂಡ ನಂತರ, ರೈತರ ಸ್ವಿತೆಯು ತ್ರಿಶಂಕು ಸ್ವರ್ಗದಲ್ಲಿನ ಅಂತರಿಕ್ಷಾಚಿಯಂತಾಗಿದೆ. ಈ ಕಡೆ ಸಗಣಿ ಗೊಬ್ಬರವೂ ಸಾಕಷ್ಟು ಸಿಗುತ್ತಿಲ್ಲ, ಆ ಕಡೆ ರಸಗೊಬ್ಬರಗಳಿಗೂ ರೈತರು ದುಡ್ಡು ಹೊಂಚಲಾಗುತ್ತಿಲ್ಲ.

ಶೀತಲೀಕರಣ ಘಟಕಗಳ ಕೊರತೆ: ಹೂವು, ಹಣ್ಣು ಮತ್ತು ತರಕಾರಿಗಳ ಆಯುಷ್ಯ ತುಂಬಾ ಕಡಿಮೆ; ಗಿಡದಿಂದ ಕಿತ್ತ ಒಂದೆರಡು ದಿನಗಳಲ್ಲಿಯೇ ಅವುಗಳ ವಿಲೇವಾರಿ ಆಗಬೇಕಾಗುತ್ತದೆ. ಆದರೆ ಹಳ್ಳಿಯಿಂದ ಮಾರುಕಟ್ಟೆಗೆ ಸಮರ್ಪಕ ರಸ್ತೆ/ಸಾರಿಗೆ ವ್ಯವಸ್ಥೆ ಇಲ್ಲದಿರುವುದಂದಲೋ ಅಥವಾ ಮಾರುಕಟ್ಟೆಯಲ್ಲಿ ಉತ್ತಮ ಬೆಲೆ ಸಿಗದ ಕಾರಣಕ್ಕೋ ರೈತರು ಗಿಡದಿಂದ ಕಿತ್ತ ಹಣ್ಣು-ತರಕಾರಿಗಳನ್ನು ಒಂದಷ್ಟು ಕಾಲ ಶೀತಲೀಕರಣ ಘಟಕಗಳಲ್ಲಿ (ಕೋಲ್ಡ್ ಸ್ಟೋರೇಜ್) ಇರಿಸಬೇಕಾದ ಅನಿವಾರ್ಯತೆ ಎದುರಾಗುತ್ತದೆ. ಆದರೆ, ಕೃಷಿಯೇ ಮೂಲಾಧಾರವಾಗಿರುವ ನಮ್ಮ ನಾಡಿನಲ್ಲಿ ಇಂಥ ಘಟಕಗಳು ಹೇಳಿಕೊಳ್ಳುಮ್ಮು ಪ್ರಮಾಣದಲ್ಲಿ ಇಲ್ಲದಿರುವುದು ವಿಪರ್ಯಾಸ. ಹೀಗಾಗಿ ತಾವು ಆತೀವ ಆಸ್ಥೆಯಿಂದ ಬೆಳೆದ ಹೂವು-ಹಣ್ಣು-ತರಕಾರಿಗಳು ಕಣ್ಣೆದುರೇ ಕೊಳೆಯುವುದನ್ನು ನೋಡಿಕೊಂಡು ರೈತರು ಕಣ್ಣೀರನ್ನು ಇಂಗಿಸಿಕೊಳ್ಳಬೇಕಾಗಿ ಬಂದಿದೆ.

● **ಕೃಷಿ ಭೂಮಿಯ ನಷ್ಟ:** ರಸ್ತೆಗಳ ನಿರ್ಮಾಣ, ನಗರೀಕರಣ, ಕೈಗಾರಿಕೆಗಳ ಮತ್ತು ವಿಶೇಷ ಆರ್ಥಿಕ ವಲಯಗಳ ಅಭಿವೃದ್ಧಿ ಚಟುವಟಿಕೆಗಳಿಗೆ ಫಲವತ್ತಾದ ಕೃಷಿಭೂಮಿಯನ್ನು ರೈತರು ಬಿಟ್ಟುಕೊಡಬೇಕಾಗಿ ಬರುವಂಥದ್ದು ಮತ್ತು ಅದಕ್ಕೆ ಪ್ರತಿಫಲವಾಗಿ ನಗಣ್ಯ ಮೊತ್ತವನ್ನು ಸ್ವೀಕರಿಸಿ ಸಮಾಧಾನ ಪಟ್ಟುಕೊಳ್ಳಬೇಕಿರುವಂಥದ್ದು ಮತ್ತೊಂದು ಆನಪೇಕ್ಷಿತ ಬೆಳವಣಿಗೆ. ಇದರಿಂದಾಗಿ, ತಮ್ಮ ಪೂರ್ವಿಕರಿಗೂ ಆನ್ನವ್ಯವಸಿದ್ದ ತಲತಲಾಂತರದಿಂದ ಬಂದ ಕೃಷಿಕರ ಭೂಮಿಯು ಪರಭಾರೆಯಾಗುವುದರ ಜತೆಗೆ, ಆಹಾರೋತ್ಪಾದನೆಯಲ್ಲೂ ಕುಸಿತವಾಗಿ ಸ್ವಾವಲಂಬನಕ್ಕೆ ಧಕ್ಕೆಯಾಗುತ್ತದೆ, ಕೃಷಿ ಉತ್ಪನ್ನಗಳನ್ನು ಆಮದು ಮಾಡಿಕೊಳ್ಳಬೇಕಾದ ಪರಿಸ್ಥಿತಿ ಎದುರಾಗುತ್ತದೆ. ಹಾಗೆಂದ ಮಾತ್ರಕ್ಕೆ ಅಭಿವೃದ್ಧಿ ಚಟುವಟಿಕೆಗಳು ನಡೆಯಬಾರದು ಅಂತಲ್ಲ; ಆದರೆ ಕೃಷಿಕರ ಸಮಾಧಿಯ ಮೇಲೆ ಬಲ್ಲಿದರಿಗೆಂದು ಮಹಲನ್ನು ಕಟ್ಟುವುದು ಎಷ್ಟರಮಟ್ಟಿಗೆ ಸರಿ? ಎಂಬುದಿಲ್ಲಿ ಪ್ರಶ್ನೆ.

● **ಬೇಕಿದೆ ಬೆಳವಿಮೆಯ ಶಿಸ್ತು:** ಕೃಷಿಕಾರ್ಯವು ಹಲವು ಸವಾಲು-ಸಮಸ್ಯೆಗಳ ಆಡುಂಬೊಲವಷ್ಟೇ ಅಲ್ಲ, ಅನಿಶ್ಚಿತತೆಯ ಬೀಡೂ ಹೌದು. ಏಕೆಂದರೆ, ಭೂಮಿಯ ಸಾಗುವಳಿಯಿಂದ ಮೊದಲ್ಗೊಂಡು, ಬಿತ್ತನೆ ಬೀಜ-ರಸಗೊಬ್ಬರ-ಕೂಲಿಕಾರ್ಮಿಕರ ಲಭ್ಯತೆ, ಬೆಳೆಯ ಕಟಾವಿನ ನಂತರದ ಬೆಲೆಯ ನಿರೀಕ್ಷಣೆ ಹೀಗೆ ಒಂದೊಂದು ಹಂತದಲ್ಲೂ ರೈತರು ಅನಿಶ್ಚಿತತೆಯ ಕೂಸುಗಳೇ ಆಗಿಬಿಡುತ್ತಾರೆ. ಈ ಪೈಕಿ ಯಾವ ಹಂತದಲ್ಲಿ ಎಷ್ಟವಬ್ಬಾದರೂ ಬೆಳೆ ಕೈಕೊಟ್ಟು ರೈತರು ನಷ್ಟಮುಖಿ ಆಗುವುದನ್ನು ತಪ್ಪಿಸಲಾಗದು. ಇನ್ನು ನಿಗದಿತ ಕಾಲಕ್ಕೆ ಬಾರದ ಮಳೆ ಮತ್ತು ಅಕಾಲದಲ್ಲಿ ಸುರಿವ ಭಾರಿ ಮಳೆಯಿಂದಾಗಿಯೂ, ಕೀಟಗಳಿಂದಾಗಿಯೂ ಬೆಳೆನಷ್ಟವಾಗುವುದಿದೆ. ಬೆಳೆವಿಮೆಯನ್ನು ಖರೀದಿಸುವುದು ಇಂಥ ಸಂದರ್ಭಗಳಲ್ಲಿ ರೈತರಿಗೆ ವರದಾನವಾಗಬಲ್ಲದು. ಆದರೆ ನಾಡಿನ ಗಣನೀಯ ಸಂಖ್ಯೆಯ ರೈತರು ಈ ವಿಷಯದಲ್ಲಿ ಇನ್ನೂ ಮಾಹಿತಿವಂತರಾಗಿಲ್ಲ. ವಿವಿಧ ವಿಮಾ ಕಂಪನಿಗಳು ಕೈಗೆಟುಕುವ ದರದಲ್ಲಿ ನೀಡುವ ಬೆಳೆವಿಮೆಯ ಪ್ರಯೋಜನವನ್ನು ರೈತರು ಪಡೆಯುವಂತಾಗುವಲ್ಲಿ ಸರಕಾರ ಮತ್ತು ಕ್ಷೇತ್ರತಜ್ಞರು ನೆರವಾಗಬೇಕಿದೆ.

● **ನೇಣಿಗೆ ಕೊರಳೊಡ್ಡದಿರಲಿ:** ಬೆಳೆದ ಬೆಳೆಗೆ ಬೆಂಬಲ ಬೆಲೆ ಸಿಗದಿರುವಿಕೆ, ಮಳೆಯೇ ಬಾರದಿರುವಿಕೆ ಅಥವಾ ಅಕಾಲಿಕ ಭರ್ಜರಿ ಮಳೆಯಿಂಥ ನೈಸರ್ಗಿಕ ವಿಕೋಪ, ಕೀಟಗಳ ಕಾಟ ಮುಂತಾದ ಕಾರಣದಿಂದಾಗಿ ಆದ ಬೆಳೆನಷ್ಟ, ಬಿತ್ತನೆಯ ಕಾಲಘಟ್ಟದಿಂದ ಮೊದಲ್ಗೊಂಡು ಬೆಳೆಯ ಕಟಾವಿನವರೆಗಿನ ವಿವಿಧ ಹಂತಗಳಲ್ಲಿ ಸಾಲದಾತರಿಂದ ಪಡೆದ ಆತೀರೇಕದ ಬಡ್ಡಿಯ ಸಾಲ ಇವೆಲ್ಲದರ ಹೊಡೆತವನ್ನು ತಡೆದುಕೊಳ್ಳಲಾರದೆ ರೈತರು ನೇಣಿಗೆ ಕೊರಳೊಡ್ಡುವ ಇಲ್ಲವೇ ಕೀಟನಾಶಕವನ್ನು ಸೇವಿಸಿ ಇಹಲೋಕ ತ್ಯಜಿಸುವ ಸಾಕಷ್ಟು ಪ್ರಕರಣಗಳನ್ನು ಕಂಡಿದ್ದೇವೆ. ಅನ್ನದಾತನ ಅನ್ನದ ಬಟ್ಟಲಿಗೇ ಸಂಚಕಾರ ಒದಗುವ ದುಸ್ಥಿತಿ ಇನ್ನಾದರೂ ಕೊನೆಯಾಗಲಿ ಎಂಬುದೇ ಸಹೃದಯಿಗಳ ಆಶಯ...

ಅಲಿಕಲ್ಲು ಮಳೆಗೆ ಉದುರಿದ ಮಾವಿನಕಾಯಿ

V-karantaka pg 05

ವಿಕ ಸುದ್ದಿಲೋಕ ಬೆಂಗಳೂರು

ರಾಜ್ಯದ ಕೋಲಾರ, ತುಮಕೂರು, ವಿಜಯಪುರ, ಬಾಗಲಕೋಟೆ, ರಾಯಚೂರು, ಬೆಳಗಾವಿ, ಹಾವೇರಿ, ಬೀದರ್, ಕೊಪ್ಪಳ ಜಿಲ್ಲೆಗಳಲ್ಲಿ ಮಳೆ ಆಗಿದೆ. ಕೋಲಾರದಲ್ಲಿ ಬಿರುಗಾಳಿ ಸಹಿತ ಜೋರು ಮಳೆಗೆ ಮಾವು ಬೆಳೆಗೆ ಹಾನಿಯಾಗಿದೆ. ವಿಜಯಪುರ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಆಲಿಕಲ್ಲು ಸಹಿತ ಮಳೆ ಆಗಿದೆ.

1,100 ಹೆಕ್ಟೇರ್ ಪ್ರದೇಶದಲ್ಲಿ ಹಾನಿ: ಕೋಲಾರ ಜಿಲ್ಲೆಯ ಶ್ರೀನಿವಾಸಪುರ, ಕೋಲಾರ ಹಾಗೂ ಮುಳಬಾಗಲು ತಾಲೂಕಿನ ವಿವಿಧ ಕಡೆಗಳಲ್ಲಿ ಭಾನುವಾರ ರಾತ್ರಿ ಸುರಿದ ಬಿರುಗಾಳಿ ಸಹಿತ ಜೋರು ಮಳೆಯಿಂದಾಗಿ ಅಂದಾಜು 3 ಸಾವಿರ ಎಕರೆಗೂ ಹೆಚ್ಚಿನ ಪ್ರದೇಶದ ಮಾವಿಗೆ ಹಾನಿಯಾಗಿದೆ.

ಜೋರಾದ ಗಾಳಿ ಸಹಿತ ಸುರಿದ ಭಾರಿ ಮಳೆಯಿಂದಾಗಿ ಪಿಂದೆಗಳು ಹಾಗೂ ಮಾವಿನ ಕಾಯಿಗಳು ನೆಲಕ್ಕೆ ಉರುಳಿದ್ದು, ಆಲಿಕಲ್ಲಿನಿಂದ ಕಾಯಿಗಳಿಗೆ ಹಾನಿಯಾಗಿ, ಬೆಳೆಗಾರರು ತೊಂದರೆ ಅನುಭವಿಸುವಂತಾಗಿದೆ.

ಅಂದಾಜು 1,100 ಹೆಕ್ಟೇರ್‌ಗೂ ಹೆಚ್ಚಿನ ಪ್ರದೇಶದಲ್ಲಿ ಹಾನಿಯಾಗಿರುವುದಾಗಿ ತೋಟಗಾರಿಕೆ ಇಲಾಖೆಯ ಅಧಿಕಾರಿಗಳು ಜಿಲ್ಲಾಡಳಿತಕ್ಕೆ ವರದಿ ನೀಡಿದ್ದಾರೆ. ತಿಳಿಸಿದ್ದಾರೆ.

ಕೃಷಿ ವಿವಿಯಿಂದ ಅರ್ಜಿ ಆಹ್ವಾನ

Viswavani pg 03

ಬೆಂಗಳೂರು: ಬೆಂಗಳೂರಿನ ಕೃಷಿ ವಿವಿಯ ಬೇಕಿಂಗ್ ತಂತ್ರಜ್ಞಾನ ಮತ್ತು ಮೌಲ್ಯವರ್ಧನಾ ಸಂಸ್ಥೆಯು ಹದಿನಾಲ್ಕು ವಾರಗಳ ಬೇಕರಿ ಟೆಕ್ನಾಲಜಿ ಸರ್ಟಿಫಿಕೇಟ್ ಕೋರ್ಸ್‌ಗೆ ಆಸಕ್ತರಿಂದ ಅರ್ಜಿ ಆಹ್ವಾನಿಸಿದೆ. ಎಸ್‌ಎಸ್‌ಎಲ್‌ಸಿ ಪಾಸ್, ಫೇಲ್ ಆದವರೂ 10 ರು. ಸಂದಾಯಿಸಿ ಅರ್ಜಿ ಫಾರಂಗಳನ್ನು ಭರ್ತಿ ಮಾಡಿ ಸಂಯೋಜಕರು ಮತ್ತು ಮುಖ್ಯಸ್ಥ ಬೇಕಿಂಗ್ ತಂತ್ರಜ್ಞಾನ ಮತ್ತು ಮೌಲ್ಯವರ್ಧನಾ ಸಂಸ್ಥೆ, ಕೃಷಿ ವಿವಿಗೆ ಮಾ.29ರ ಅಪರಾಹ್ನ 4.00 ಘಂಟೆಯೊಳಗೆ ತಲುಪಿಸಬೇಕು. ಹೆಚ್ಚಿನ ಮಾಹಿತಿಗೆ 080-23513370 ಗೆ ಸಂಪರ್ಕಿಸಿ ಎಂದು ಪ್ರಕಟಣೆಯಲ್ಲಿ ತಿಳಿಸಿದೆ

Summer rain brings joy, farmers can look at 2 crops

ASHWINI M SRIPAD @ Bengaluru

Ind Exp Pg 05

HERE'S good news for farmers: With summer showers expected to be good, they can harvest two crops this year. Experts are suggesting that farmers take up short-term crops before the monsoon. Not just double cropping in a year, good pre-monsoon showers hold many benefits which were not recorded substantially in the past many years. With the Met department forecasting good rain in April and May, farmers are about to reap these benefits.

Speaking to The New Indian Express, former director, Karnataka State Natural Disaster Management Centre, Srinivas Reddy said with groundwater depletion, the quality and quantity of water would have dropped. However, good showers in April and May would recharge groundwater, improving its quality and quantity.



Reddy said the rain would bring down dependency on borewells, and indirectly help farmers to cut down energy consumption. Not just this, rain would also help in greening grasslands, which serve as fodder for cattle, again helping farmers in a big way.

According to experts, this year, farmers can take up two crops. They can start sowing 80-85 day crops like cowpea, green gram or even tomatoes, and harvest them by June, claimed Prof Rajegowda, former registrar, University of Agricultural Sciences, Bengaluru.

This year, the Northeast monsoon was deficient at many places, however, rain in the last couple of days is helping soil gain moisture, and farmers are gearing up to sow pre-monsoon crops. Farmers from Chamarajanagar, Mysuru, Mandya and parts of Hassan have already started preparing land for sowing.

Agriculture Minister N Cheluvarayaswamy said they are aware that pre-monsoon showers will be good this year. "After many years, pre-monsoon showers are good. Farmers in many parts of Karnataka have started agricultural activities and we have directed officials from the taluk level to the Raitha Samparka Kendra to supply the required seeds and fertilizers to farmers," he added.

Hailstones in summer are not good for crops, especially those which are ready to flower or for harvest. Experts have also cautioned farmers to be wary of lightning and thunder, which is common during summer showers. "We appeal to them not to step out," said Reddy.

Tariffs, market access for agricultural goods on agenda as U.S. trade delegation visits India

Suhasini Haidar
NEW DELHI

Two high-powered delegations led by Mike Waltz and J.D. Vance are set to visit India in April

Market access for agricultural produce, a long-protected area in Indian imports, could be on the agenda as a U.S. delegation, headed by Brendan Lynch, the U.S. Trade Representative's point-person for South and Central Asia, travels to India on Tuesday for a five-day visit.

While the visit, which comes just before the announcement of "reciprocal tariffs" by the Trump administration, is expected to focus on lowering Indian import duties, U.S. Commerce Secretary Howard Lutnik's recent comments that he asked Prime Minister Narendra Modi why India won't "buy a bushel of [American] corn" has led to speculation that the Bilateral Trade Agreement being discussed will be more comprehensive than an "item-by item" negotiation. On Monday, Mr. Modi met Commerce Minister Piyush Goyal and External Affairs Minister S. Jaishankar, reportedly to discuss the upcoming talks and tariffs, government sources said.

Two high-powered U.S. delegations, including National Security Advisor Mike Waltz and U.S. Vice-President J.D. Vance, are also set to separately visit India next month, officials confirmed.

"As directed by the leaders of the two countries, India remains committed to working with the U.S. side in the trade and economic domains to enhance prosperity and innovation in both India and the U.S., and deepen supply chain integration between the two countries," the Commerce Ministry said in a statement on Monday.

Officials did not comment on President Donald Trump's latest threat to impose 25% additional tariffs on countries that buy oil from Venezuela. While India had zeroed out its oil imports from Venezuela after threats from the previous Trump administration, it resumed imports in December 2023 after the Biden administration relaxed some sanctions. In 2024, India imported 22 million barrels from Venezuela, and Indian PSUs have invested about $1 billion in the country.

Mr. Lynch, the Assistant U.S. Trade Representative for South and Central Asia, will be in India from March 25 to 29 for "regular" trade talks, the Ministry said, indicating the talks will focus on the BTA rather than the impending tariffs that will be implemented on a number of countries, including India, from April 2.

"This visit reflects the United States' continued commitment to advancing a productive and balanced trade relationship with India," the U.S. Embassy spokesperson said, adding that the U.S. looks forward to discussions on trade and investment in a "constructive, equitable, and forward-looking manner".

India-U.S. trade, including goods and services, is touching $200 billion, with a trade deficit of about $45 billion in India's favour, which Mr. Trump has asked India to address.

In an interview to the "All-In" podcast over the weekend, Mr. Lutnik said he had raised the sharp divide in deficits and import duties during Mr. Modi's visit to Washington in February. He claimed India has an average "50%" tariff on imports, (India's simple tariff average, according to WTO, is 17%), compared with the U.S.'s "4%", and that India "protects its farmers".

"I said to PM Modi, you have 1.4 billion people and you brag to us how amazing your economy is... Why won't you buy a bushel of our corn?" adding, "So [U.S.] farmers can't go to [India] but [Indian farmers] can come at us... Why is that okay?".


Thus far India has allowed market access for a range of American nuts, duck meat, and apples, but analysts say that negotiators must now be prepared to discuss the influx of a range of American agricultural products.

(With inputs from Nistula Hebbar)

Hindu Pg 05

ಈರುಳ್ಳಿ ರಫ್ತು ಸುಂಕ ಶೂನ್ಯಕ್ಕೆ ಇಳಿಸಿದ ಕೇಂದ್ರ

ಹೊಸದಿಲ್ಲಿ: ಈರುಳ್ಳಿ ರಫ್ತು ಮೇಲೆ ಇದ್ದ ಅಬಕಾರಿ ಸುಂಕವನ್ನು ಕೇಂದ್ರ ಸರಕಾರ ಶೂನ್ಯಕ್ಕೆ ಇಳಿಸಿದ್ದು, ಇದು ಮುಂಬರುವ ಏಪ್ರಿಲ್ 1ರಿಂದ ಜಾರಿಗೆ ಬರಲಿದೆ. ಈ ಹಿಂದೆ ಈರುಳ್ಳಿ ರಫ್ತು ಸುಂಕವನ್ನು ಶೇ.40ಕ್ಕೆ ಏರಿಸಲಾಗಿತ್ತು. ಈರುಳ್ಳಿ ಬೆಲೆ ಕುಸಿತದಿಂದ ರೈತರ ಆದಾಯ ನೆಲ ಕಚ್ಚಿತ್ತು. ಆಗ ರಫ್ತು ಸುಂಕವನ್ನು ಶೇ.20ಕ್ಕೆ ಇಳಿಸಲಾಯಿತು. ಈಗ ಅದನ್ನೂ ಸಂಪೂರ್ಣವಾಗಿ ತೆಗೆದು ಹಾಕಲಾಗಿದೆ. ''ರಫ್ತು ಮೇಲಿನ ಸುಂಕ ರದ್ದತಿಯಿಂದಾಗಿ ನಮ್ಮ ರೈತರು ಬೆಳೆದ ಈರುಳ್ಳಿ ಜಾಗತಿಕ ಮಾರುಕಟ್ಟೆಗಳಿಗೆ ತಲುಪಲು ಸಹಾಯಕವಾಗಲಿದೆ. ಇದರಿಂದ ರೈತರ ಆದಾಯ ವೃದ್ಧಿಯಾಗುತ್ತದೆ,'' ಎಂದು ಕೇಂದ್ರ ಕೃಷಿ ಸಚಿವ ಶಿವರಾಜ್‌ಸಿಂಗ್ ಚೌಹಾಣ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.



V-karantaka pg 02